‘ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು ನಮಗೀಗಲೆ ಬರಲಿ, ಇದಕಾರಂಜುವರು? ಇದಕಾರಳುಕುವರು?...’ ಎಂದು ಉಘೇ ಎನ್ನುತ್ತ ಅಂದಿನ ಸಮಾಜದ ಶುದ್ಧೀಕರಣಕ್ಕೆ ಪಣತೊಟ್ಟು ಹೊರಟ ಬಸವಣ್ಣನನ್ನು ಪ್ರತಿಗಾಮಿ ಮನಸ್ಸುಗಳು ಆಹುತಿ ತೆಗೆದುಕೊಂಡವು. ಆದರೆ, ಅವನ ಮಹತ್ವಾಕಾಂಕ್ಷೆಯನ್ನು ಮುರುಟಿಸಿತೆ? ಬಲಿ ತೆಗೆದುಕೊಂಡಿತೆ? ಖಂಡಿತ ಇಲ್ಲ. ವರ್ಗ ರಹಿತ, ವರ್ಣ ರಹಿತ ಸಮಾಜ ಸೃಷ್ಟಿಯಾಗುವವರೆಗೂ ಬಸವಣ್ಣ ಮರೆಯಾಗುವುದಿಲ್ಲ, ಅಲ್ಲವೆ? ಆತನೊಬ್ಬ ಮಾನವಕುಲದ ದೇದೀಪ್ಯಮಾನವಾದ ಜ್ಯೋತಿಯಲ್ಲವೆ? ಅದೇ ದಾರಿಯಲ್ಲಿ ನಡೆದ ನಮ್ಮ ದಾಸವರೇಣ್ಯರಾದ ಕನಕದಾಸರು, ಅಸ್ಪೃಶ್ಯತೆಯ ನೋವುಗಳನ್ನು ತನ್ನೊಡಲಲ್ಲಿ ತುಂಬಿಕೊಂಡು ಸ್ವಯಂಭೂ ಆಗಿ ಬೆಳೆದ ಛಲವಂತ ಅಂಬೇಡ್ಕರ್, ತಮ್ಮ ಲೇಖನಿಯ ಸಾಮರ್ಥ್ಯವನ್ನು ಜನಮುಖಿಯಾಗಿ, ಜೀವನ್ಮುಖಿಯಾಗಿ ಬೆಳೆಸಿದ ‘ವಿಶ್ವ ಮಾನವ’ತೆಯ ಕುವೆಂಪು, ಇಂಥ ಮಹಾಚೇತನಗಳು ನಮ್ಮ ಇತಿಹಾಸದುದ್ದಕ್ಕೂ ಕಂಡುಬರುತ್ತಾರೆ. ಇವರೆಲ್ಲ ನಮ್ಮ ಬೆನ್ನು ಹಿಂದೆ ಇದ್ದು ಸಮಾನತೆಯ ಸಮಾಜವನ್ನು ಹಾರೈಸುತ್ತಿದ್ದಾರೆ, ಬೆಂಬಲಿಸುತ್ತಿದ್ದಾರೆ ಅಂದಮೇಲೆ ನಾವು ನೀವು ಹಿಂಜರಿಯುತ್ತ ಕೂರುವುದರಲ್ಲಿ ಏನರ್ಥವಿದೆ ಹೇಳಿ? ಅವರ ದಾರಿಯಲ್ಲಿ ನಾವು ಕೊಂಚ ದೂರವಾದರೂ ಸರಿಯಬಾರದೆ? ನಮಗೇಕೆಂದು ತಟಸ್ಥರಾಗಬಾರದು. ತಟಸ್ಥ ವ್ಯಕ್ತಿ ಎಂದೂ ಪ್ರತಿಗಾಮಿಯೇ ಆಗಿರುತ್ತಾನೆ ಎಂಬುದು ನಮಗೆ ನೆನಪಿದ್ದರೆ ಸಾಕು. ಇಲ್ಲಿ ನಮ್ಮ ಕವಿ ರಾಘವಾಂಕನ ‘ನಡೆವರೆಡಹದೆ ಕುಳಿತಿಹರೆಡಹುವರೆ?’ ಎಂಬ ಮಾತೇ ದಿಗ್ದರ್ಶಿಯಾಗಬೇಕು.

ಆದರೆ, ಸಮಾಜದಲ್ಲಿ ಎಲ್ಲರೂ ಹೀಗೇ ಇರುವರೇನು? ಖಂಡಿತ ಇಲ್ಲ. ಜೀವನದಲ್ಲಿ ಒಂದು ಗುರಿ ಮುಟ್ಟಲು ಹಲವು ದಾರಿಗಳಿರುವ ಹಾಗೆ ಒಂದು ಸಮಸ್ಯೆಯನ್ನು ಪರಿಹರಿಸುವುದಕ್ಕೂ ಹಲವು ದಾರಿಗಳಿದ್ದೇ ಇರುತ್ತದಲ್ಲವೆ? ಅದು ಸರಿಯೊ ತಪ್ಪೊ ಆಮೇಲಿನ ಮಾತು. ಈಗ ನೋಡಿ, ನಮ್ಮ ದೇಶದ ಬಹು ಸಂಕೀರ್ಣವಾದ ಈ ಜಾತಿ ವ್ಯವಸ್ಥೆಯನ್ನು ನಾಶ ಮಾಡಿ, ಸಾಮಾಜಿಕ ಸಮಾನತೆಯನ್ನು ತರುವುದಕ್ಕೆ ಈ ಹಿಂದೆ ನನ್ನ ಕಿರಿಯ ಗೆಳೆಯನೊಬ್ಬ ಸೂಚಿಸಿದ ಪರಿಹಾರ ಬಲು ಸ್ವಾರಸ್ಯವಾಗಿದೆ. ಇದರ ಬಗ್ಗೆ ಒಂದೆರಡು ವಾಕ್ಯಗಳಲ್ಲಿ ತಮಗೆ ತಿಳಿಸಿ ಹೇಳಿದರೇನೆ ಆ ಸ್ವಾರಸ್ಯ ಮನದಟ್ಟಾಗುವುದು. 1989ರ ಅಕ್ಟೋಬರ್ 2ರಂದು ನರಸಿಪುರದಲ್ಲಿ ಒಂದು ವಿಚಾರ ಸಂಕಿರಣವನ್ನು ಕರ್ನಾಟಕ ವಿಚಾರವಾದಿ ಒಕ್ಕೂಟದಿಂದ ವ್ಯವಸ್ಥೆ ಮಾಡಿದ್ದೆವು. ಆಗ ನಾನು ಒಕ್ಕೂಟ ಮತ್ತು ವಿಚಾರ ಸಂಕೀರ್ಣ ಈ ಎರಡಕ್ಕೂ ಅಧ್ಯಕ್ಷನಾಗಿದ್ದೆ. ಅಗಲಿದ ನಮ್ಮ ಗೆಳೆಯ ಸಾಹಿತಿ ಶಿವರಾಮ ಕಾಡನಕುಪ್ಪೆ ಮುಖ್ಯ ಭಾಷಣಕಾರರಾಗಿದ್ದರು. ಸಮಕಾಲೀನವಾದ ಜಾತಿ ಸಮಸ್ಯೆಯನ್ನೇ ಕುರಿತು ಅವರು ತಮ್ಮ ಬಿರು ಭಾಷಣವನ್ನು ಮಾಡುತ್ತಿದ್ದರು. ಅದನ್ನು ಗಮನವಿಟ್ಟು ಕೇಳುತ್ತಿದ್ದ ಪರವೂರಿನಿಂದ ಬಂದಿದ್ದ ಕಿರಿಯ ಗೆಳೆಯನೊಬ್ಬ ಈ ಜಾತಿ ವಿನಾಶಕ್ಕೆ ತನ್ನದೇ ಆದ ‘ವೈಚಾರಿಕ ಪರಿಹಾರ’ವನ್ನು ಕಂಡುಹಿಡಿದಿದ್ದ. ಅವನ ಪ್ರಕಾರ ‘ದೇಶದಲ್ಲಿರುವ ಎಲ್ಲ ಜನರನ್ನು ಸಾಲಾಗಿ ನಿಲ್ಲಿಸಿ, ಒಚ್ಚೋರಿಂದ (ಒಂದು ಕಡೆಯಿಂದ) ಎಕ್ಕಡದಲ್ಲಿ ಹೊಡ್ಕೊಂಡು ಬಂದ್ರೆ ಎಲ್ಲ ಜಾತಿಗೆಟ್ಟೋಗ್ತಾರೆ. ಜಾತಿಗೆಟ್ಟೋವ್ರೆಲ್ಲ ಒಂದೇ ಜಾತಿ ಆಗ್ತಾರೆ. ಆಗ ಆ ಜಾತಿ, ಈ ಜಾತಿ ಅನ್ನೊ ಪ್ರಮೇಯವೆ ಬರಲ್ಲ. ಮೇಲು ಕೀಳು ಅನ್ನೋದೆ ಇರಲ್ಲ’ ಎಂಬುದು. ಇವನ ಮಾತು ಮತ್ತು ಅಭಿಪ್ರಾಯ ಕೇಳೋದಕ್ಕೇನೊ ಸ್ವಾರಸ್ಯವೂ ಆಗಿದೆ, ವಿಚಿತ್ರವೂ ಆಗಿದೆ. ಆದರೆ, ಇದು ಸಾಧುವೆ ಮತ್ತು ಇದನ್ನು ಜಾರಿಗೆ ತರಲು ಸಾಧ್ಯವೆ ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ ಅನ್ನಿ. ಈ ರೀತಿ ಅಭಿಪ್ರಾಯಕ್ಕೆ ಬರಲು ಆ ಕಿರಿಯ ಗೆಳೆಯನಿಗೆ ಕಾರಣವಿಲ್ಲದೆ ಇಲ್ಲ. ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಈ ಜಾತಿಯ ಹಾವಳಿಯನ್ನು ನೋಡಿ ನೋಡಿ ಬೇಸತ್ತು ಹೋಗಿ, ಅವನು ಈ ತೀರ್ಮಾನಕ್ಕೆ ಬಂದಿರಬಹುದು ಅಂತ ನಾವು ಸುಲಭವಾಗಿ ಊಹಿಸಬಹುದು. ಏನು ಮಾಡುವುದು, ಇದು ಅವನ ದೃಷ್ಟಿಕೋನ. ಇನ್ನೊಬ್ಬ ನನ್ನ ಪರಿಚಿತ ಗೆಳೆಯ ಜಯತೀರ್ಥ